ಮಬ್ಬಾದ ಕನ್ನಡಿಯಂತೆ ಮಸುಕಾಗಿತ್ತು. ಈ ಹಗಲು, ಅಗ್ನಿಪರ್ವತವೊಂದು ಲಕ್ಷಾಂತರ ಚೂರುಗಳಾಗಿ ಸಿಡಿದು ಭೂಮಿಯ ಮೇಲೆ ಬಿದ್ದಂತಾಗಿತ್ತು. ತನ್ನ ಬೆತ್ತಲೆ ಎದೆಯ ಮೇಲೆ ಬಿದ್ದ ಅಷ್ಟೊಂದು ಕಾವನ್ನು ಭೂಮಿ ಹೇಗೆ ಸಹಿಸಿಕೊಂಡಿತ್ತೊ ಕಾಣೆ!

ಇದ್ದಕ್ಕಿದ್ದಂತೆ ತಿಮ್ಮಯ್ಯನ ಮೇಲೆ ಎಂಥದ್ದೊ ಬೆಳಕಿನ ರಾಶಿಯೊಂದು ಅನಾಮತ್ತಾಗಿ ಕವುಚಿ ಕೊಂಡಂತಾಯಿತು. ಎತ್ತ ನೋಡಿದರೂ ಹೊಳೆಯುತ್ತಿದ್ದ ಬೆಳಕು. ಹೊಂಗೆಮರದ ಮೇಲೆ, ತಿಪ್ಪೆಯ ಮೇಲೆ, ಕುರಿಗೂಡಿನ ಮೇಲೆ.... ಬೆಳಕೊ ಬೆಳಕು! ತಾನು ದಿನವೂ ಕುರಿ ಮೇಸಲು ಹೋಗುತ್ತಿದ್ದ ಅಷ್ಟೇನೂ ಎತ್ತರವಲ್ಲದ ಗಿರಿಂಡೆಗುಡ್ಡ (ಮೇಲೆ ಸೊಂಪಾಗಿ ಬೆಳೆದಿದ್ದ, ಬಾಧೆಹುಲ್ಲು, ಕರಿಕೆಹುಲ್ಲು, ಸೀರಣಿಕೆಹುಲ್ಲು, ಅಕ್ಕಿಹುಲ್ಲು, ಮುಳ್ಳುಲ್ಲು, ಅಲಗಿನಹುಲ್ಲು) ಬಗೆಬಗೆಯ ಹುಲ್ಲುಗಳ ದಟ್ಟ ಹಸುರನ್ನು ಹೊದ್ದು ರಂಕಳಿಸುತ್ತಿತ್ತು. ಇದರ ಜೊತೆಗೆ ಅಲ್ಲಲ್ಲಿ ಅರಳಿದ್ದ ತಿಳಿ ಅರಿಶಿನ ಬಣ್ಣದ ತಂಗಟೆ ಹೂಗಳ ತುಟಿಯಂಚಿನ ನಗೆಯಿಂದ ಗುಡ್ಡ ಹೊಳೆಯುತ್ತಿತ್ತು. ಅದರ ಪಕ್ಕದ ಬುಡ್ಡನಕಟ್ಟೆಯಲ್ಲಿದ್ದ ಗಾಜಿನಂಥ ನೀರು. ಇವೆಲ್ಲವೂ ಕಣ್ಣ ಮುಂದೆ ನಿಂತಾಗ ತಿಮ್ಮಯ್ಯನ ಕಣ್ಣುಗಳಲ್ಲಿ ಸಂತಸದ ಕಡಲು ಉಕ್ಕತೊಡಗಿತು. ಹಾಗೆಯೆ ದಿಟ್ಟಿಸುತ್ತಿರಲು ಗಿರಿಂಡೆ ಗುಡ್ಡದ ಕಡೆಯಿಂದ ನೀಲಿ ಆಕಾಶದ ಕೆಳಗೆ ಅರಳೆಯಂತೆ ತೇಲಿ ಬರುತ್ತಿದ್ದ ಮಂಜಿನಂಥ ಮೋಡಗಳ ರಾಶಿಯೊಂದು ಅವನ ಕಣ್ಣುಗಳಿಗೆ ಕಾಣಿಸಿತು. ನಿಧಾನವಾಗಿ ತನ್ನ ಕಣ್ಣುಗಳಿಗೆ ಆವರಿಸಿ ಕೊಂಡಿದ್ದ ಬೆಳಕನ್ನು ಆಚೀಚೆ ಸರಿಸಿ ಒಮ್ಮೆ ನೋಡಿದ. ತನ್ನ ಪ್ರೀತಿಪಾತ್ರ ಬಿಳಿಕುರಿ ಮೋಡಗಳಿಂದ ಇಳಿದು ತನ್ನ ಕಡೆಗೇ ಬರತೊಡಗಿತು. ತನ್ನ ಬಾಯಲ್ಲಿ ಮಾಗಿದ ಮಲಗೂಬ ಹಣ್ಣೊಂದನ್ನು ಕಚ್ಚಿ ಹಿಡಿದಿತ್ತು. ಹುಲ್ಲೆಮರಿಯಂತೆ ಹೊಳೆಯುತ್ತಿದ್ದ ಬಿಳಿಕುರಿ ಮೋಡಗಳಿಂದ ನೆಗೆಯುತ್ತಾ ಕರುಣೆಯ ಧ್ವನಿಯಿಂದ ತನ್ನ ಒಡೆಯನನ್ನು ಕೂಗುತ್ತಾ ಸಣ್ಣತಿಮ್ಮಯ್ಯನ ತೋಳತೆಕ್ಕೆಗೆ ಜಿಗಿಯಿತು. ಮಲಗೂಬಹಣ್ಣನ್ನು ಸಣ್ಣತಿಮ್ಮಯ್ಯನ ತೆಕ್ಕೆಗಿಟ್ಟು, ಅವನ ಮುಖವನ್ನು ತನ್ನ ತಿಳಿಗೆಂಪು ನಾಲಗೆಯಿಂದ ಸವರತೊಡಗಿತು. ಬಿಸಿಲಿನಂತೆಯೇ ಅದರ ಕಣ್ಣುಗಳು ಹೊಳೆಯುತ್ತಿದ್ದವು. ಅದರ ಮುಖದಲ್ಲಿ ತಾಯಿಗುರಿಯನ್ನು ಸೇರಿದ ಮರಿಕುರಿಯ ಸಂತಸವಿತ್ತು. ಅದರ ಅಪ್ಪುಗೆಯಲ್ಲಿ ಸಣ್ಣತಿಮ್ಮಯ್ಯ ಮುಳುಗಿಹೋದ. ಅದು ತಂದಿದ್ದ ಮಲಗೂಬಹಣ್ಣನ್ನು ನೋಡಿ ತಿಮ್ಮಯ್ಯನ ಮುಖ ಮತ್ತಷ್ಟು ಅರಳಿತು! ಮಲಗೂಬ ಮಾವಿನಹಣ್ಣು ಮತ್ತು ಬಿಳಿಕುರಿ ಎಂದರೆ ಸಣ್ಣತಿಮ್ಮಯ್ಯನಿಗೆ ಪ್ರಾಣಕ್ಕಿಂತ ಮಿಗಿಲು. ಯಾವುದೊ ಅಗಲುವಿಕೆಯಿಂದ ಭಾರವಾಗಿದ್ದ ಅವನ ಹೃದಯ ಈಗ ನಿಧಾನವಾಗಿ ಹಗುರಾಯಿತು. ಕಣ್ಣೀರಿನಲ್ಲಿ ಮುಳುಗಿದ್ದ ಅವನ ಕಣ್ಣುಗಳು ಈಗ ಸ್ವಚ್ಛವಾಗತೊಡಗಿದವು. ಸುಕ್ಕುಗಟ್ಟಿದ್ದ ಕೈಗಳಿಂದ ಬಿಳಿಕುರಿಯನ್ನು ತನ್ನ ಹೃದಯಕ್ಕೆ ತಾಕುವಂತೆ ಬಿಗಿಯಾಗಿ ಅಪ್ಪಿಕೊಂಡ. ಅದರ ಕೊರಳಲ್ಲಿದ್ದ ಗೆಜ್ಜೆಗಳು ಗಲಗಲ ಶಬ್ದಮಾಡತೊಡಗಿದವು.

ಅವನ ನೆನಪಿನ ತೋಟದೊಳಗೆ ಪರಿಮಳ ಬೀರುವ ಹೂಗಳು ಬಿರಿಯತೊಡಗಿದವು.

* * *

ಗೊಲ್ಲಾಳ್ವಿಕೆಯ ಗೌಡನಾಗಿದ್ದ ಗಿರಗೌಡನ ಮಗ ಸಣ್ಣತಿಮ್ಮಯ್ಯ ಕುರಿ ಕಾಯುವುದರಲ್ಲಿ ರುಸ್ತುಮ್ಮ! ಕುರಿಗಳು ಯಾವ ಹುಲ್ಲನ್ನು ಮೇಯುತ್ತವೆ; ಯಾವ ಹುಲ್ಲನ್ನು ಮೇಯುವುದಿಲ್ಲ, ಯಾವ ನೀರಿನಗಡ್ಡೆಯಲ್ಲಿ ನೀರು ಕುಡಿಯುತ್ತವೆ; ಯಾವ ನೀರಿನಗಡ್ಡೆಯಲ್ಲಿ ನೀರು ಕುಡಿಯುವುದಿಲ್ಲ! ಅವುಗಳಿಗೆ ಆಗಾಗ ಬರುತ್ತಿದ್ದ ರೋಗ, ಅವುಗಳಿಗೆ ನೀಡಬೇಕಾಗಿದ್ದ ಮದ್ದು ಇವೆಲ್ಲದರ ಬಗ್ಗೆ ಅಪಾರವಾದ ತಿಳಿವಳಿಕೆಯುಳ್ಳವನಾಗಿದ್ದ. ಎಳೆಯ ವಯಸ್ಸಾಗಿದ್ದರೂ ಇವೆಲ್ಲ ಅವನಿಗೆ ಹೇಗೊ ಕರಗತವಾಗಿದ್ದವು! ಸಣ್ಣತಿಮ್ಮಯ್ಯ ಕುರಿಗಳಿಗೆ

